# ೨,೩೦೦ ರೂ.ಗೆ ರಾಗಿ ಖರೀದಿ

## ಜೋಳಕ್ಕೆ ೨,೧೦೦ ರೂ. ನಿಗದಿ; ಅನ್ನಭಾಗ್ಯ ಯೋಜನೆಗೆ ೫ ಕೆ.ಜಿ. ರಾಗಿ: ಪ್ರಕಾಶ್ ಕಮ್ಮರಡಿ

ಮೈಸೂರು,ಡಿ.೨೯– ರೈತರು ಎಷ್ಟು ರಾಗಿ ಬೆಳೆದರೂ ಕ್ವಿಂಟಾಲ್‌ಗೆ ೨,೩೦೦ ರೂ. ಬೆಂಬಲ ಬೆಲೆ ನೀಡಿ ಸರ್ಕಾರ ಖರೀದಿಸಲಿದೆ. ಅಂತೆಯೇ ಜೋಳಕ್ಕೆ ೨,೧೦೦ ರೂ. ನಿಗದಿಪಡಿಸಲಾಗಿದ್ದು, ತೊಗರಿಯ ಖರೀದಿಗೂ ಕ್ರಮ ವಹಿಸಲಾಗುವುದು ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ ತಿಳಿಸಿದರು.

ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ಶುಕ್ರವಾರ ಸಂಜೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಬೆಳೆಗಳಿಗೆ ಸಂಬಂಧಿಸಿದಂತೆ ಉತ್ಪಾದನಾ ವೆಚ್ಚ ಎಷ್ಟಾಗಲಿದೆ? ಮಾರುಕಟ್ಟೆವಾರು ಬೆಲೆ ಮುನ್ನಂದಾಜು ಎಷ್ಟಾಗಲಿದೆ? ಎಂದು ತಿಳಿಸಲು ವಿಶ್ವದಲ್ಲೇ ಪ್ರಥಮ ಬಾರಿಗೆ ಸಾಫ್ಟ್‌ವೇರ್ ಮಾಡೆಲ್ ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದರು.

ಈ ಸಂಬಂಧ ಮೈಕ್ರೋಸಾಫ್ಟ್‌ನವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ೬ ತಿಂಗಳ ಅವಧಿಯ ಬೆಲೆ ಮುನ್ನಂದಾಜಿನ ಮಾಡೆಲ್‌ಗಳನ್ನು ವಿವಿಗಳಿಗೂ ನೀಡಲಾಗಿದೆ. ರಾಜ್ಯದ ೫ ವಿವಿಗಳಲ್ಲಿ ಇದಕ್ಕೆ ಸಂಬಂಧಿಸಿದ ಸೆಲ್‌ಗಳಿರುವುದಾಗಿ ಹೇಳಿದರು.

ಈ ಆಧಾರದಂತೆ ಮುಂದಿನ ಏಪ್ರಿಲ್‌ವರೆಗೆ ಭತ್ತ, ರಾಗಿ, ಜೋಳ, ಶೇಂಗಾ, ಕಡಲೆ, ಸೋಯಾ ಅವರೆ, ಹತ್ತಿ, ಟೊಮೆಟೊ, ಈರುಳ್ಳಿ, ಮಾವು, ತೆಂಗು, ದ್ರಾಕ್ಷಿ, ಅಡಿಕೆ, ಶುಂಠಿ, ಏಲಕ್ಕಿ ಸೇರಿದಂತೆ ೨೬ ಬೆಳೆಗಳಿಗೆ ಸಂಬಂಧಿಸಿದಂತೆ ಉತ್ಪಾದನೆ, ಉತ್ಪಾದನಾ ವೆಚ್ಚದ ಇಳಿಕೆ ಹಾಗೂ ಮುಂದಿನ ಪರಿಸ್ಥಿತಿಗಳ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದು ವಿವರಿಸಿದರು.

ವರದಿಯಂತೆ ಭತ್ತ, ಹತ್ತಿ, ರಾಗಿ, ಕಡಲೆ, ಈರುಳ್ಳಿ, ಟೊಮೆಟೊ ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳಿಗೆ ಒಳ್ಳೆಯ ಬೆಲೆ ಸಿಗಬಹುದು ಎಂದು ಹೇಳಲಾಗಿತ್ತು. ಆಮದು– ರಫ್ತಿನಿಂದ ವ್ಯತ್ಯಾಸ ಕಂಡುಬರುವ ಸಂಭವವಿದೆ. ಹಾಗೆಯೇ ಅಪನಗದೀಕರಣ, ಜಿಎಸ್‌ಟಿ ಪ್ರಭಾವದಿಂದ ಮಾರುಕಟ್ಟೆ ವ್ಯವಸ್ಥೆಗೆ ತೊಂದರೆಯಾಗಿ ಧಾರಣೆ ಇಳಿಯುವ ಸಾಧ್ಯತೆಗಳೂ ಇವೆ. ಈ ಬಗ್ಗೆ ಸೂಕ್ತ ಕ್ರಮಕ್ಕೆ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ತಿಳಿಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಕೆ.ಎನ್. ಸೋಮಸುಂದರ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

> ಮುಸುಕಿನ ಜೋಳ ಖರೀದಿಗೆ ರಾಜ್ಯ ಸರ್ಕಾರ ಸಿದ್ಧವಾಗಿದ್ದರೂ ಕೇಂದ್ರ ಸರ್ಕಾರ ಅಡ್ಡಗಾಲು ಹಾಕಿದೆ. ಅನ್ನಭಾಗ್ಯ ಯೋಜನೆಯಡಿ ೨೦ ಕೆ.ಜಿ. ಅಕ್ಕಿ, ೫ ಕೆ.ಜಿ ರಾಗಿ (ದಕ್ಷಿಣ ಕರ್ನಾಟಕದವರಿಗೆ), ೫ ಕೆ.ಜಿ. ಜೋಳ (ಉತ್ತರ ಕರ್ನಾಟಕದವರಿಗೆ) ನೀಡಲಾಗುವುದು.
>
> **- ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ**



ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಶುಕ್ರವಾರ ಸಂಜೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ ಮಾತನಾಡಿದರು

# ಇದೇ 1ರಿಂದ ಕೃಷಿ ಬೆಲೆ ಅಂದಾಜು ಪಟ್ಟಿ ಪ್ರಕಟ

ಮೈಸೂರು: ರಾಜ್ಯ ಕೃಷಿ ಬೆಲೆ ಅಂದಾಜು ಆಯೋಗವು ಜ.1ರಿಂದ 26 ಕೃಷಿ ಉತ್ಪನ್ನಗಳ 6 ತಿಂಗಳ ಅಂದಾಜು ಬೆಲೆಯನ್ನು ಆನ್‌ಲೈನ್‌ನಲ್ಲಿ ಪ್ರಕಟಿಸಲಿದೆ ಎಂದು ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ತಿಳಿಸಿದರು.

'ದೇಶದಲ್ಲೇ ಮೊದಲ ಬಾರಿ ಈ ರೀತಿಯ ಪ್ರಯತ್ನ ಮಾಡಲಾಗುತ್ತಿದೆ. ಇದಕ್ಕಾಗಿ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಲಾಗಿದೆ. ಮೈಕ್ರೊಸಾಫ್ಟ್ ಸಾಫ್ಟ್‌ವೇರ್ ಪಡೆಯಲಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಈಗಾಗಲೇ ಉತ್ಪಾದನೆಯಾಗಿ ದಾಸ್ತಾನಿನಲ್ಲಿರುವ ಬೆಳೆಗಳಿಗೆ ಮಾತ್ರ ಈ ಬೆಲೆ ಅನ್ವಯಿಸುತ್ತದೆ. ಇದರಿಂದ ಮಾರುಕಟ್ಟೆಯ ಅಂದಾಜು ಬೆಲೆಯನ್ನು ಗಮನಿಸಿ ಅಗತ್ಯವಿದ್ದಲ್ಲಿ ಮಾರಾಟ ಮಾಡುವ ಅವಕಾಶ ರೈತರಿಗೆ ಸಿಗುತ್ತದೆ. ಮುಂದಿನ 6 ತಿಂಗಳಲ್ಲಿ ಭತ್ತ, ರಾಗಿ, ಕಡಲೆ, ಹತ್ತಿಗೆ ಉತ್ತಮ ಬೆಲೆ ಸಿಗಲಿದೆ ಎಂದು ಈಗಾಗಲೇ ಆಯೋಗವು ವರದಿ ನೀಡಿದೆ' ಎಂದರು.

'ರಾಜ್ಯದ 5 ವಿಶ್ವವಿದ್ಯಾಲಯಗಳ ಸಹಾಯ ಪಡೆಯಲಾಗಿದೆ. ವಿ.ವಿಗಳಲ್ಲಿ ಘಟಕಗಳನ್ನು ತೆರೆದು ರೈತರಲ್ಲಿ ಅರಿವು ಮೂಡಿಸಲು ಕರಪತ್ರ ಮುದ್ರಿಸಿ ಹಂಚಲಾಗುವುದು' ಎಂದರು.

ಮೈಸೂರು ಮಿತ್ರ

ಶನಿವಾರ 30 ಡಿಸೆಂಬರ್ 2017

# ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಿಂದ ಬೇಸಾಯದಲ್ಲಿ ನೀರಿನ ಸದ್ಬಳಕೆ ಸಂಬಂಧ ರೈತರಲ್ಲಿ ಅರಿವು

## ರೈತರಿಗೆ ತಂತ್ರಾಂಶದ ಉಪಕರಣ ಉಚಿತ ವಿತರಣೆ



ಮೈಸೂರು ತಾಲೂಕಿನ ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಭಾಂಗಣದಲ್ಲಿ 'ನಿಖರ ಬೇಸಾಯ ಪದ್ಧತಿ' ಕುರಿತು ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಡಿ. 29(ಪಿಎಂ)– ಯಾವ ಬೆಳೆ ಯಾವ ಸಮಯದಲ್ಲಿ ಎಷ್ಟು ನೀರು ಆಪೇಕ್ಷಿಸುತ್ತದೆ? ಹೀಗೆ ಬೆಳೆಗೆ ಸಂಬಂಧಿಸಿದ ಹತ್ತು ಹಲವು ಮಾಹಿತಿ ನೀಡಿ ಉತ್ತಮ ಇಳುವರಿ ಪಡೆಯಲು ನೆರವಾಗುವ ತಂತ್ರಾಂಶ ಅಭಿವೃದ್ಧಿಪಡಿಸಿರುವ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ, ಇದೀಗ ಪ್ರಾಯೋಗಿಕ ಕ್ಷೇತ್ರ ಕಾರ್ಯಕ್ಕೆ ಚಾಲನೆ ನೀಡುತ್ತಿದೆ.

ಈ ನಿಟ್ಟಿನಲ್ಲಿ ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಕೃಷಿ ಇಲಾಖೆ ಸಹಯೋಗದಲ್ಲಿ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ (ಎಂಐಟಿ) ವತಿಯಿಂದ 'ನಿಖರ ಬೇಸಾಯ ಪದ್ಧತಿ: ನೀರಿನ ಸದ್ಬಳಕೆ' ಕುರಿತು ಶುಕ್ರವಾರ ಹಮ್ಮಿಕೊಂಡಿದ್ದ ಒಂದು ದಿನದ ಕಾರ್ಯಾಗಾರದಲ್ಲಿ ವರುಣಾ ಹಾಗೂ ಮಂಡ್ಯ ಜಿಲ್ಲೆಯ ಪಾಂಡವಪುರ ವ್ಯಾಪ್ತಿಯ 100 ಮಂದಿ ರೈತರಿಗೆ ತಂತ್ರಾಂ ಶದ ಉಪಕರಣಗಳನ್ನು ಉಚಿತವಾಗಿ ವಿತರಿಸಲಾಯಿತು.

ವೈರ್‌ಲೆಸ್ ಸೆನ್ಸರ್ ನೆಟ್‌ವರ್ಕ್ ವ್ಯವಸ್ಥೆಯಡಿ ಅಭಿವೃದ್ಧಿಗೊಳಿಸಿರುವ ಈ ತಂತ್ರಾಂಶದ ಉಪಕರಣವನ್ನು ರೈತರ ಕೃಷಿ ಭೂಮಿಯಲ್ಲಿ ಅಳವಡಿಸಲಾಗುತ್ತದೆ. ಬಳಿಕ ಸರ್ವರ್ ಮೂಲಕ ಮಹಾರಾಜ ತಾಂತ್ರಿಕ ಮಹಾ ವಿದ್ಯಾಲಯದ ಪ್ರಯೋಗಾಲಯಕ್ಕೆ ಹವಾಮಾನ ಸೇರಿದಂತೆ ಬೆಳೆಯ ಸ್ಥಿತಿಗತಿಯ ಚಿತ್ರಣ ರವಾನೆಯಾಗಲಿದೆ. ನಂತರ ಅದನ್ನು ರೈತರ ಮೊಬೈಲ್‌ಗಳಿಗೆ ಸಂದೇಶದ ಮೂಲಕ ಕಳುಹಿಸಲಾಗುತ್ತದೆ.

ಕಾರ್ಯಾಗಾರ ಉದ್ಘಾಟಿಸಿದ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ. ಎನ್.ಪ್ರಕಾಶ್‌ಕಮ್ಮಾರಡ್ಡಿ ಮಾತನಾಡಿ, ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬರಗಾಲ ಇಲ್ಲವೇ ಅಕಾಲಿಕ ಮಳೆಯಿಂದ ಕೃಷಿ ಕ್ಷೇತ್ರಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಪ್ರಸಕ್ತ ಸಾಲಿನಲ್ಲಿ ಮುಂಗಾರು ಕೈಕೊಟ್ಟರೂ ಹಿಂಗಾರು ತಕ್ಕ ಮಟ್ಟಿಗೆ ನೆರವಾಯಿತು. ಇಂತಹ ಸನ್ನಿವೇಶದಲ್ಲಿ ಬೆಳೆಯ ಸ್ಥಿತಿಗತಿ ಅರಿತು ಮಾರ್ಗಗಳನ್ನು ಕಂಡುಕೊಳ್ಳಲು ಈ ಉಪಕರಣ ನೆರವಾಗುವ ವಿಶ್ವಾಸವಿದೆ ಎಂದು ಹೇಳಿದರು.

**ರಾಜ್ಯಾದ್ಯಂತ ನಿಖರ ಬೇಸಾಯ ಪದ್ಧತಿ:** ಎಂಐಟಿ ಇ ಅಂಡ್ ಸಿ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಮಹೇಶ್‌ರಾವ್ ನೇತೃತ್ವದಲ್ಲಿ ವೈರ್‌ಲೆಸ್ ಸೆನ್ಸರ್ ನೆಟ್‌ವರ್ಕ್ ವ್ಯವಸ್ಥೆಯಡಿ ನಿಖರ ಬೇಸಾಯ ಪದ್ಧತಿಗೆ ಅಗತ್ಯವಾದ ತಂತ್ರಾಂಶ ಅಭಿವೃದ್ಧಿಗೊಳಿಸಲಾಗಿದೆ. ಇದೀಗ ಈ ತಂತ್ರಾಂಶ ಸಾಧಕ-ಬಾಧಕಗಳ ಸಂಬಂಧ ಪ್ರಯೋಗಕ್ಕೆ ಎಂಐಟಿ ಮುಂದಾಗಿದ್ದು, ಇದು ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾದಲ್ಲಿ ಈ ನಿಖರ ಬೇಸಾಯ ಪದ್ಧತಿಯ ತಂತ್ರಾಂಶವನ್ನು ರಾಜ್ಯಾದ್ಯಂತ ವಿಸ್ತರಿಸಲು ಎಲ್ಲಾ ಕ್ರಮ ವಹಿಸುವಂತೆ ಆಯೋಗದಿಂದ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಡಾ.ಟಿ.ಎನ್. ಪ್ರಕಾಶ್ ಕಮ್ಮಾರಡ್ಡಿ ತಿಳಿಸಿದರು.

ಇಳಿಮುಖಗೊಳ್ಳುವ ಬೆಳೆಗಳ ದರದಿಂದ ರೈತರಿಗೆ ಉಂಟಾಗುವ ನಷ್ಟ ತಡೆಗಟ್ಟಲು ರಾಜ್ಯ ಸರ್ಕಾರ ತೊಗರಿ ಸೇರಿದಂತೆ ಅನೇಕ ಬೆಳೆಗಳನ್ನು ಖರೀದಿಸಿದೆ. ಇದೇ ರೀತಿ ಮುಸುಕಿನ ಜೋಳ ಖರೀದಿಗೆ ರಾಜ್ಯ ಸರ್ಕಾರ ಮುಂದಾಗಿತ್ತು. ಆದರೆ ಮುಸುಕಿನ ಜೋಳವನ್ನು ರೈತರಿಂದ ಖರೀದಿಸಿದರೆ, ಅದನ್ನು ಪಡಿತರದಾರರಿಗೆ ವಿತರಣೆ ಮಾಡಬೇಕು ಎಂಬ ಷರತ್ತು ವಿಧಿಸುವ ಮೂಲಕ ಕೇಂದ್ರ ಸರ್ಕಾರ ಇದಕ್ಕೆ ಅವಕಾಶ ಕೊಡಲಿಲ್ಲ ಎಂದು ಆರೋಪಿಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಸೋಮಸುಂದ್ರ ಮಾತನಾಡಿ, ಮೈಸೂರು ಸೇರಿದಂತೆ ರಾಜ್ಯಾದ್ಯಂತ ಕಳೆದ 3 ವರ್ಷಗಳಿಂದ ಬರಗಾಲವಿದೆ. ಆದರೆ ಈ ವರ್ಷ ಮೈಸೂರು ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ಪೂರ್ವ ಮುಂಗಾರು ಉತ್ತಮವಾಗಿ ಆಗಿದ್ದರೆ, ಆಗಸ್ಟ್ ಹಾಗೂ ಸೆಪ್ಟೆಂಬರ್ ಮಾಸದಲ್ಲಿ ದಾಖಲೆ ಮಳೆಯಾಗಿದೆ. ನಿಖರ ಕೃಷಿ ಪದ್ಧತಿ ಎಂದರೆ, ಬೆಳೆಯ ವಿವಿಧ ಹಂತಗಳ ಬೆಳವಣಿಗೆಗಳನ್ನು ಅವಲೋಕಿಸಿ ಉತ್ತಮ ಇಳುವರಿಗೆ ಪೂರಕ ವಾತಾವರಣ ನಿರ್ಮಿಸುವುದಾಗಿದೆ ಎಂದು ವಿವರಿಸಿದರು. ಮಹಾರಾಜ ಎಜುಕೇಷನ್ ಟ್ರಸ್ಟ್ (ಎಂಇಟಿ) ಅಧ್ಯಕ್ಷ ಡಾ.ಎಸ್. ಮುರಳಿ, ಕಾರ್ಯದರ್ಶಿ ಡಾ.ಟಿ.ವಾಸುದೇವ, ಎಂಐಟಿ ಪ್ರಾಧ್ಯಾಪಕ ಡಾ.ಮಹೇಶ್ ರಾವ್, ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕ ಶಿವಕುಮಾರ್ ಮತ್ತಿತರರು ಹಾಜರಿದ್ದರು.

> ಕಳೆದ 3 ವರ್ಷಗಳ ಹಿಂದೆ ರಾಜ್ಯ ಕೃಷಿ ಬೆಲೆ ಆಯೋಗವನ್ನು ರಾಜ್ಯ ಸರ್ಕಾರ ಅಸ್ತಿತ್ವಕ್ಕೆ ತಂದಿತು. ಬೇರೆ ಯಾವ ರಾಜ್ಯ ದಲ್ಲಿ ಕೃಷಿ ಬೆಲೆ ಆಯೋಗ ಇಲ್ಲವಾಗಿದ್ದು, ಆಯೋಗ ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆ ನಿಗದಿ ಸೇರಿದಂತೆ ರೈತ ಸಮುದಾಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಹಲವು ಶಿಫಾರಸುಗಳನ್ನು ಮಾಡಿದೆ. ಈ ಬಾರಿ ರಾಗಿಗೆ ಕ್ವಿಂಟಾಲ್‌ಗೆ 2,300 ರೂ. ದರ ನಿಗದಿ ಮಾಡಲಾಗಿದೆ. ಈ ಸಾಲಿನಲ್ಲಿ ಭತ್ತ ರಾಗಿ, ಕಡಲೆ ಹಾಗೂ ಹತ್ತಿಗೆ ಉತ್ತಮ ಬೆಲೆ ಸಿಗಲಿದ್ದು, ಬಾಕಿ ಬೆಳೆಗಳ ಬೆಲೆಯಲ್ಲಿ ಇಳಿಮುಖ ಆಗುವ ಎಲ್ಲಾ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ ರೈತರಿಗೆ ನಷ್ಟವಾಗದಂತೆ ಕ್ರಮ ವಹಿಸಲು ರಾಜ್ಯ ಸರ್ಕಾರ ಸನ್ನದ್ಧವಾಗಿದೆ.
>
> –ಡಾ.ಟಿ.ಎನ್.ಪ್ರಕಾಶ್‌ಕಮ್ಮಾರಡಿ

## ಕ್ಯಾಲೆಂಡರ್ ಬಿಡುಗಡೆ